ಓ.ಎಲ್. ನಾಗಭೂಷಣ ಸ್ವಾಮಿ

# ಮೂಲವೆನ್ನುವುದೇ ಕಲ್ಪಿತ

ಅನುವಾದ ಸಂವಾದ

1 ನೀವು ಹೆಸರಿಸಿರುವ ಅನುವಾದಗಳೆಲ್ಲವೂ, 'ಮೂಲ' ಕೃತಿಯ ಹಾಗೆಯೇ, ಆಯಾ ಕೃತಿಗೆ ತಕ್ಕ ಅನುವಾದ ಭಾಷೆಯನ್ನು ಕಂಡುಕೊಂಡಿವೆ. ಯಾವ ಅನುವಾದ ಕಣ್ಣಿಗೂ ಮನಸಿನ ಕಿವಿಗೂ ಕನ್ನಡದ ಹಾಗೆ ಕೇಳುತ್ತದೆಯೋ, 'ಇದು ಮತ್ತೊಂದು ಮೂಲದ ಸೃಷ್ಟಿ,' ಅನ್ನುವ ಹಾಗೆ ಮೈ ಪಡೆದಿರುತ್ತದೋ ಅದು ಉತ್ತಮ ಅನುವಾದವಾಗುತ್ತದೆ. ಸಮಕಾಲೀನ ಅನುವಾದಗಳು ಕಲ್ಪಿತವಾದ 'ಮೂಲ'ಕ್ಕೆ ನಿಷ್ಠವಾಗಿರಬೇಕೆಂಬ ಒತ್ತಾಯದಲ್ಲಿ ಕನ್ನಡಕ್ಕಿಂತಲೂ ಮೂಲದ ಭಾಷೆಗೆ ಹೆಚ್ಚು ನಿಷ್ಠವಾಗುವುದೇ ಅನುವಾದ ಸಾಮಾನ್ಯವಾದದ್ದಾಗಲು ಕಾರಣ. ಇಂಗ್ಲಿಷ್ ಮಟ್ಟಿಗೆ ಈ ಮಾತು ಹೆಚ್ಚು ನಿಜ. ಅನುವಾದಕರ ಸುಪ್ತಮನಸಿನಲ್ಲಿರುವ ಕನ್ನಡದ ನುಡಿಬಳಕೆಯ ಸಂಪತ್ತು ಕ್ಷೀಣವಾಗಿದ್ದಾಗಲೂ ಹೀಗಾಗಬಹುದು.

2 ಕನ್ನಡದ ಅರಿವನ್ನು ಇತರ ಭಾಷೆಗಳಿಗೂ, ಇತರ ಭಾಷೆಗಳಲ್ಲಿರುವ ಅರಿವನ್ನು ಕನ್ನಡಕ್ಕೂ ತಂದುಕೊಳ್ಳಬೇಕೆಂಬ ಮಹತ್ವಾಕಾಂಕ್ಷೆ, ಈ ಸಾಂಸ್ಕೃತಿಕ ಸಾಹಸಕ್ಕೆ ಅನುವಾದಕರನ್ನು ಸಿದ್ಧಪಡಿಸುವ ಅಪೇಕ್ಷೆ, ಕನ್ನಡದ ಅನುವಾದಕರಿಗೆ ಮನ್ನಣೆ, ಅನುವಾದ ಅಧ್ಯಯನಕ್ಕೆ ಫೆಲೋಶಿಪ್ ಇಂಥ ಚಟುವಟಿಕೆಗಳು ಕುವೆಂಪು ಭಾಷಾ ಭಾರತಿಯ ವೈಶಿಷ್ಟ್ಯಗಳು. ಆಡಳಿತ ಮಂಡಳಿಯ ದೃಷ್ಟಿಕೋನ, ವಿವೇಕ, ಅನುವಾದಕ್ಕೆ ಆಯ್ಕೆಗೊಳ್ಳುವ ಕೃತಿ, ಅನುವಾದಕರ ಸಾಮರ್ಥ್ಯ ಇಂಥ ಹಲವು ಸಂಗತಿಗಳು ಭಾಷಾ ಭಾರತಿಯ ಪ್ರಕಟಣೆಯ ಗುಣಮಟ್ಟವನ್ನು ನಿರ್ಧರಿಸುತ್ತವೆ. ಕೇವಲ ಸಂಖ್ಯೆಯ ದೃಷ್ಟಿಯಿಂದ ಮಾತ್ರವಲ್ಲ, ಗುಣಮಟ್ಟದ ದೃಷ್ಟಿಯಿಂದಲೂ ಕುವೆಂಪು ಭಾಷಾ ಭಾರತಿಯು ತನ್ನಂಥ ಇತರ ಸರ್ಕಾರಿ ಸಂಸ್ಥೆಗಳಿಗಿಂತ ಗಮನಾರ್ಹವಾದ ಕೆಲಸವನ್ನೇ ಮಾಡಿದೆ ಎಂಬುದು ನನ್ನ ಅಭಿಪ್ರಾಯ. ಎಲ್ಲ ಸರ್ಕಾರಿ ಸಂಸ್ಥೆಗಳಿಗೂ ಇರುವ ದೌರ್ಬಲ್ಯ ಮತ್ತು ಅಪಾಯಗಳು ಭಾಷಾ ಭಾರತಿಗೂ ಇವೆ. ಅದೃಷ್ಟವಶಾತ್ ಕಳೆದ ಹತ್ತು ವರ್ಷಗಳಲ್ಲಿ ಈ ಸಂಸ್ಥೆ ಗಮನಾರ್ಹವಾದ ಕೆಲಸವನ್ನೇ ಮಾಡಿದೆ.

3 ಕನ್ನಡದಲ್ಲೇ ಅರಳಿದ ಸಹಜ, ಸಮರ್ಥ, ಸದೃಢ ಕೃತಿ ಅನಿಸಬೇಕು. ನೀವು ಮೇಲೆ ಹೆಸರಿಸಿರುವ ಕೃತಿಗಳಲ್ಲದೆ ಎ.ಆರ್. ಕೃಷ್ಣಶಾಸ್ತ್ರಿಯವರ 'ವಚನ ಭಾರತ,' 'ಕಥಾಮೃತ,' ಪುತಿನ ಅವರ 'ಫೌಸ್ಟ್,' ನಾ. ಕಸ್ತೂರಿಯವರ 'ಪಾತಾಳದಲ್ಲಿ ಪಾಪಚ್ಚಿ,' ಬಸವಪ್ಪಶಾಸ್ತ್ರಿಯವರ 'ಕರ್ನಾಟಕ ಶಾಕುಂತಲ,' ಬಿ.ಎಂ.ಶ್ರೀ ಅವರ 'ಅಶ್ವತ್ಥಾಮನ್', ಎಲ್. ಗುಂಡಣ್ಣನವರ ಅನುವಾದಗಳು ತಕ್ಷಣಕ್ಕೆ ನೆನಪಿಗೆ ಬರುತ್ತಿವೆ.

4 ಮೂಲವು ಪ್ರಾಚೀನ, ಮೂಲವು ಶ್ರೇಷ್ಠ ಎಂಬ ನಂಬಿಕೆ ಜನಮಾನಸದಲ್ಲಿ ದೃಢವಾಗಿ ಬೇರು ಬಿಟ್ಟಿದೆ. ಆದರೆ ಮೂಲವೆನ್ನುವುದೇ ಕಲ್ಪಿತವಾದದ್ದು. ಒಂದು ಸಾಹಿತ್ಯ ಕೃತಿಯನ್ನು ಎಷ್ಟು ಜನ